**ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು ಇವರ ಕಾರ್ಯಾಲಯದ ನಡವಳಿ.**

ವಿಷಯ: ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬುಕ್ಕಾಪಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ ಚಿ.ನಾ.ಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನು ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನು ಬಳಕೆ ಮಾಡಬೇಕಾಗಿದ್ದು ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ1: ಸರ್ಕಾರದ ಆದೇಶ ಸಂಖ್ಯೆ: WRD 166 VBYE 2020 (ಭಾ-1), ಬೆಂಗಳೂರು (ಜಲ ಸಂಪನ್ಮೂಲ) ಇಲಾಖೆ ದಿನಾಂಕ:16-12-2020.

2: ಕಾರ್ಯಪಾಲಕ ಅಭಿಯಂತರರು, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ ನಂ.9 ಶಿರಾ, ಇವರ ಪತ್ರ ನಂ:ಕಾಇಂ/ವಿಜನಿನಿ/ಭಮೇಯೋ/ವಿ-9/ಶಿರಾ/ಅರಣ್ಯ/ 444/20-21 ದಿನಾಂಕ:01-01-2021.

3: ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/113/2019-20 ದಿನಾಂಕ: 01-01-2021.

4: ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ಇವರ ಪತ್ರ ಸಂಖ್ಯೆ: ಎಲ್.ಎನ್.ಡಿ:ಸಿಆರ್:219/2020-21 ದಿನಾಂಕ:12-01-2021.

5: ಈ ಕಾರ್ಯಾಲಯದ ಸಮ ಸಂಖ್ಯೆ ಪತ್ರ ದಿನಾಂಕ:27-01-2021.

6: ಉಪ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ವಿಭಾಗ, ತುಮಕೂರು ಇವರ ಪತ್ರ ಸಂಖ್ಯೆ: ಎ5/ಲ್ಯಾಂಡ್/ ಸಿಆರ್-111/ 2019-20/ 250 ದಿನಾಂಕ: 10-02-2021.

7. ಈ ಕಾರ್ಯಾಲಯದಿಂದ ಸರ್ಕಾರಕ್ಕೆ ಸಮ ಸಂಖ್ಯೆಯಂತೆ ಬರೆದ ಪತ್ರ ದಿನಾಂಕ: 04-03-2021.

8. ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ:22: ಎಲ್‌ಜಿಟಿ: 2021. ದಿನಾಂಕ: 22-05-2021.

9. ಈ ಕಾರ್ಯಾಲಯದಿಂದ ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ಸಮ ಸಂಖ್ಯೆಯಂತೆ ಬರೆದ ಪತ್ರ ದಿನಾಂಕ: 03-07-2021.

10. ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/113/2019-20 ದಿನಾಂಕ: 02-08-2021.

11. ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ಇವರ ಪತ್ರ ಸಂಖ್ಯೆ: ಎಲ್.ಎನ್.ಡಿ:ಸಿಆರ್:219/2020-21 ದಿನಾಂಕ:06-08-2021.

12. ಈ ಕಾರ್ಯಾಲಯದಿಂದ ಸರ್ಕಾರಕ್ಕೆ ಪತ್ರ ಬರೆದ ದಿನಾಂಕ:27-09-2021.

13. ಸರ್ಕಾರದ ಪೂರ್ವಾನುಮೋದನೆ ಪತ್ರ ಸಂಖ್ಯೆ: ಆರ್‌ಡಿ:58:ಎಲ್‌ಜಿಟಿ:2021 ದಿನಾಂಕ:17-11-2021.

14. ಈ ಕಛೇರಿಯಿಂದ ನಮೂನೆ-27 ರಡಿ ಪ್ರಕಟಣೆ ಹೊರಡಿಸಿದ ದಿನಾಂಕ: 27-12-2021.

15. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ಕಾರ್ಯಾಲಯ ತಿಮ್ಮನಹಳ್ಳಿ ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ಇವರ ಪತ್ರ ದಿನಾಂಕ:01-02-2022.

16. ತಹಶೀಲ್ದಾರ್, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇವರ ಪತ್ರ ಸಂಖ್ಯೆ: ಎಲ್.ಎ.ಕೂ:ಸಿಆರ್:75:2021-22 ದಿನಾಂಕ:05-03-2022.

17. ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ಇವರ ಪತ್ರ ಸಂಖ್ಯೆ: ಎಲ್.ಎನ್.ಡಿ:ಸಿಆರ್:68/2021-22 ದಿನಾಂಕ:18-04-2021.

18. ಈ ಕಾರ್ಯಾಲಯದಿಂದ ಸರ್ಕಾರಕ್ಕೆ ಸಮ ಸಂಖ್ಯೆಯಂತೆ ಬರೆದ ಪತ್ರ ದಿನಾಂಕ: 19-05-2022.

19. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 59 ಎಲ್‌ಜಿಟಿ 2022 ದಿನಾಂಕ: 05-11-2022.

**ಪ್ರಾಸ್ತಾವನೆ**

ಕಾರ್ಯಪಾಲಕ ಅಭಿಯಂತರರು, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ ನಂ.9 ಶಿರಾ, ಇವರು ಕ್ರ.ಸಂ(2) ರಂತೆ ಭದ್ರಾ ಮೇಲ್ಕಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ, ತಾಲ್ಲೂಕಿನ ಬುಕ್ಕಾಪಟ್ಟಣ ಮೀಸಲು ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ಈ ಸಂಬಂಧ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ, ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಬದಲಿ ಭೂಮಿಯನ್ನು ಒದಗಿಸುವಂತೆ ಕೋರಿರುತ್ತಾರೆ.

ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ ತಿಪಟೂರು ಇವರು ತಹಶೀಲ್ದಾರ್, ಚಿ.ನಾ.ಹಳ್ಳಿ, ತಾಲ್ಲೂಕುರವರಿಂದ ಕ್ರ.ಸಂ (3) ರಂತೆ ವರದಿ ಪಡೆದು ಕ್ರ.ಸಂ (4) ರಂತೆ ಪ್ರಸ್ತಾವನೆ ಸಲ್ಲಿಸಿ ಪ್ರಸ್ತಾವನೆಯಂತೆ ಭದ್ರಾ ಮೇಲ್ಕಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ, ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರ ಮೀಸಲು ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ 61-00 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ, ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೋರಿ ಪ್ರಸ್ತಾವನೆಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಂತೆ ಚಾಲ್ತಿ ಸಾಲಿನ ಗಣಕೀಕೃತ ಪಹಣಿ ಪರಿಶೀಲಿಸಲಾಗಿ, ಚಿ.ನಾ.ಹಳ್ಳಿ, ತಾಲ್ಲೂಕು, ಕಂದಿಕೆರೆ ಹೋಬಳಿ ಮೈಲುಕಬ್ಬೆ ಗ್ರಾಮದ ಸ.ನಂ.57 ರ ಪಹಣಿ ಕಾಲಂ 9 ರಲ್ಲಿ "ಖರಾಬು" ವಿಸ್ತೀರ್ಣ 577-10 ಎ/ಗುಂಟೆ ವಿಸ್ತೀರ್ಣ ನಮೂದಾಗಿದ್ದು, ತಹಶೀಲ್ದಾರ್ ರವರು ದಿನಾಂಕ: 31-12-2021, ರಂದು ಖುದ್ದು ಸ್ಥಳ ತನಿಖೆಯನ್ನು ನಡೆಸಿರುತ್ತಾರೆ, ಸದರಿ ಜಮೀನಿಗೆ ಸಂಬಂಧಿಸಿದಂತೆ ನಮೂನೆ-50, 53, ಮತ್ತು 57ರಲ್ಲಿ ಯಾವುದೇ ಅರ್ಜಿ ಬಾಕಿ ಇರುವುದಿಲ್ಲ, ಯಾರೂ ಅನಧಿಕೃತ ಸಾಗುವಳಿ ಮಾಡುತ್ತಿರುವುದಿಲ್ಲ ಖುಲ್ಲಾ ಇರುತ್ತದೆ, ಸದರಿ ಮೈಲುಕಬ್ಬೆ ಗ್ರಾಮದಲ್ಲಿ 658 ಜಾನುವಾರುಗಳಿರುತ್ತವೆ, ಫಡ ಪತ್ರಿಕೆ ರೀತ್ಯಾ ಸದರಿ ಗ್ರಾಮದಲ್ಲಿ ವಿಸ್ತೀರ್ಣ 577-10 ಎ/ಗುಂಟೆ ವಿಸ್ತೀರ್ಣದ ಜಮೀನು ಉಳಿದಿರುತ್ತದೆ, ಈ ಜಮೀನಿನಲ್ಲಿ ಯಾವುದೇ ಹೈಟೆನ್ಷನ್ ಲೈನ್ ಹಾದುಹೋಗಿರುವುದಿಲ್ಲ, ಸದರಿ ಜಮೀನಿನಲ್ಲಿ ಬೆಲೆಬಾಳುವ ಮರ ಮಾಲ್ಕಿ ಇರುವುದಿಲ್ಲ, ಸರ್ಕಾರಿ/ಅರೆ ಸರ್ಕಾರಿ ಕಟ್ಟಡಗಳಾಗಲೀ ಇರುವುದಿಲ್ಲ, ಸದರಿ ಪ್ರದೇಶವನ್ನು ಮಂಜೂರು ಮಾಡಲು ಗ್ರಾಮಸ್ಥರ ತಂಟೆ ತಕರಾರು ಇರುವುದಿಲ್ಲ, ತಾಲ್ಲೂಕು ಸರ್ವೇಯರ್ ರವರಿಂದ ಸ್ಕೆಚ್ ತಯಾರಿಸಿ ಸದರಿ ಪ್ರದೇಶಕ್ಕೆ ಹೋಗಲು ರಸ್ತೆಇರುತ್ತದೆ. ಸದರಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬಹುದೆಂದು ಅಗತ್ಯ ದಾಖಲೆಗಳೊಂದಿಗೆ ವರದಿ ಸಲ್ಲಿಸಿರುತ್ತಾರೆ. ಹಾಗೂ ಕ್ರ.ಸಂ (6) ರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ ಇಲಾಖೆ ತುಮಕೂರು ವಿಭಾಗ, ತುಮಕೂರು ಇವರು ಚಿ.ನಾ.ಹಳ್ಳಿ, ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರಲ್ಲಿ 42-84 ಹೆಕ್ಟೇರ್ (106-00) ಎಕರೆ/ಗುಂಟೆ ಜಮೀನು ಅರಣ್ಯೀಕರಣಕ್ಕೆ ಸೂಕ್ತವಾಗಿರುತ್ತದೆ ಎಂದು ಇಲಾಖಾ ಅಭಿಪ್ರಾಯ ನೀಡಿರುತ್ತಾರೆ.

ಭದ್ರಾ ಮೇಲ್ಕಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ ಮೀಸಲು ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ, ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ "ಸರ್ಕಾರಿ ಖರಾಬು" ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ)

ಜಮೀನನ್ನುಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗಿದ್ದು ಸದರಿ ಉದ್ದೇಶವು ಸಾರ್ವಜನಿಕ ಉದ್ದೇಶವಾಗಿರುವುದರಿಂದ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಕಂದಾಯ ಇಲಾಖೆಯ ಭೂಮಿಯನ್ನು ಜಮೀನನ್ನು ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಅರಣ್ಯ ಭೂಮಿಯನ್ನು ಪಡೆಯುವ ಬದಲಾಗಿ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಸಂಬಂಧ ಪೂರ್ವಾನುಮೋದನೆ ದೊರಕಿಸಿಕೊಡಲು ಕೋರಿ ಈ ಕಾರ್ಯಾಲಯದಿಂದ ಕ್ರ ಸಂ (7) ರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಭದ್ರಾ ಮೇಲ್ಕಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರ ಮೀಸಲು ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ 61-00 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಕೋರಿದ್ದು, ವಿಸ್ತೀರ್ಣ 61-00 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ಪ್ರದಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರುರವರ ಸುತ್ತೋಲೆ ದಿನಾಂಕ: 14-07-2020 ರಂತೆ ಅಷ್ಟೇ ವಿಸ್ತೀರ್ಣದಷ್ಟು ಸರ್ಕಾರಿ ಜಮೀನನ್ನು ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಬೇಕಾಗಿರುವುದರಿಂದ ಆದರೆ ಸದರಿ ಪ್ರಸ್ತಾವನೆಯಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ ಸರ್ಕಾರಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಕೋರಿರುವುದರಿಂದ, ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಶೀಲಿಸಿ, ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಕ್ರ ಸಂ (8) ರ ಪತ್ರದಲ್ಲಿ ಸೂಚಿಸಲಾಗಿತ್ತು.

ಸರ್ಕಾರದ ಪತ್ರದಂತೆ ಅರಣ್ಯ ಇಲಾಖೆಯಿಂದ ಪಡೆಯುವ ವಿಸ್ತೀರ್ಣ 61-00 ಹೆಕ್ಟೇರ್ ಬದಲಿಗೆ ಪರ್ಯಾಯ ಅರಣ್ಯೀಕರಣಕ್ಕಾಗಿ ವಿಸ್ತೀರ್ಣ 42-84 ಹೆಕ್ಟೇರ್ ಸರ್ಕಾರಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಲು ಕೋರಿರುವುದರಿಂದ, ಸೂಕ್ತ ಸ್ಪಷ್ಟೀಕರಣದೊಂದಿಗೆ ಅರಣ್ಯ ಇಲಾಖೆಯಿಂದ ಪಡೆಯುವ ಜಮೀನಿನ ಬಗ್ಗೆ ಸರ್ವೆ ನಂಬರ್ ವಾರು ನಕ್ಷೆ ಹಾಗೂ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡುವ ಜಮೀನುಗಳ ಸರ್ವೆ ನಂಬರ್‌ವಾರು ನಕ್ಷೆ ತಯಾರಿಸಿ ಅರಣ್ಯ ಇಲಾಖೆ ಕಂದಾಯ ಇಲಾಖೆ ಹಾಗೂ ಭದ್ರಾ ಮೇಲ್ದಂಡೆ ಯೋಜನೆಯ ಇಂಜಿನಿಯರ್ ರವರಿಂದ ಸಹಿಗಳನ್ನು ಮತ್ತು ಒಪ್ಪಿಗೆ ಪತ್ರ ಪಡೆದು ಪ್ರಸ್ತಾವನೆಯನ್ನು ಮತ್ತೊಮ್ಮೆ ಪರಿಶೀಲಿಸಿ, ಸ್ಪಷ್ಟ ವರದಿಯೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲು ಈ ಕಾರ್ಯಾಲಯದ ಪತ್ರ ಕ್ರ ಸಂ (9) ರಲ್ಲಿ ಸೂಚಿಸಲಾಗಿತ್ತು.

ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ಇವರು ಕ್ರ ಸಂ (10)ರಂತೆ ವರದಿ ಸಲ್ಲಿಸಿ ಭದ್ರಾ ಜಲಾಶಯದಿಂದ 29-90 ಟಿಎಂಸಿ ನೀರನ್ನು ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಅಜ್ಜಂಪುರ ಗ್ರಾಮದ ಬಳಿ ನಿರ್ಮಿಸಿರುವ 6.90 ಕಿ.ಮೀ.ಉದ್ದದ ಸುರಂಗ ಮಾರ್ಗದ ಕಾಲುವೆಗೆ ಲಿಫ್ಟ್ ಮಾಡಿ ತುಂಬಿಸಿ, ಅಜ್ಜಂಪುರ ಜಂಕ್ಷನ್‌ನ ಬಲಭಾಗಕ್ಕೆ ಕವಲೊಡೆಯುವ ಚಿತ್ರದುರ್ಗ ಶಾಖಾ ಕಾಲುವೆಯ ಮೂಲಕ ನಿಗದಿತ ಭೂ ಪ್ರದೇಶಕ್ಕೆ ನೀರನ್ನು ಹರಿಸಲು ಯೋಜಿಸಲಾಗಿದೆಂದು, ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯು ಸುಮಾರು 160 ಕಿ.ಮೀ.ಗಳಷ್ಟು ಉದ್ದವಿದ್ದು, 84900 ಹೆ ಭೂಪ್ರದೇಶಕ್ಕೆ ನೀರಾವರಿಯನ್ನು ಕಲ್ಪಿಸಲು ಮತ್ತು ಸದರಿ ಕಾಲುವೆ ಮೂಲಕ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ, 131 ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ, ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ಪಂಕ್ತೀಕರಣವು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನಲ್ಲಿ 1162 ಕಿ.ಮೀ ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ಶಿರಾ ತಾಲ್ಲೂಕಿನಲ್ಲಿ 7.774 ಕಿ.ಮೀ ಉದ್ದದವರೆಗೆ ಮೀಸಲು ಅರಣ್ಯ ಪ್ರದೇಶದಲ್ಲಿ ಹಾದುಹೋಗುತ್ತಿದ್ದು, ಸದರಿ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ವಿಸ್ತೀರ್ಣ 61-00 ಹೆಕ್ಟೇರ್‌ಗಳ ಮೀಸಲು ಅರಣ್ಯ ಭೂಮಿಯ ಅವಶ್ಯಕತೆಯಿರುತ್ತದೆಂದು ವರದಿಸಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಉಡುಗೆರೆ ಅರಣ್ಯ ಪ್ರದೇಶದಲ್ಲಿ 9.28 ಹೆಕ್ಟೇರ್ ಮತ್ತು ತುಮಕೂರು ಜಿಲ್ಲೆ ಶಿರಾ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬುಕ್ಕಾಪಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ 51.72 ಹೆಕ್ಟೇರ್ ಸೇರಿ ಎರಡು ಜಿಲ್ಲೆಗಳ ಮೀಸಲು ಅರಣ್ಯ ಪ್ರದೇಶದಲ್ಲಿ 61.00 ಹೆಕ್ಟೇರ್ ಜಮೀನು ಅವಶ್ಯಕತೆಯಿರುವುದರಿಂದ, ಪರ್ಯಾಯ ಅರಣ್ಯೀಕರಣಕ್ಕಾಗಿ ಕೋರಿದ್ದು, ದಿನಾಂಕ: 20-11-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೀಡಲಾದ ನಿರ್ದೇಶನದಂತೆ ಶಿರಾ ತಾಲ್ಲೂಕಿನ ಬೂದಿಗುಡ್ಡದ ಕಾವಲ್‌ನಲ್ಲಿ ಹಾದುಹೋಗುವ 8.88 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಹೊರತುಪಡಿಸಿ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹಾದುಹೋಗುವ ಅರಣ್ಯ ಪ್ರದೇಶದ (42.84 ಹೆಕ್ಟೇರ್ ವಿಸ್ತೀರ್ಣದ ಪರ್ಯಾಯವಾಗಿ) 106.00 ಎಕರೆ ಜಮೀನನ್ನು ಪರ್ಯಾಯ ಅರಣ್ಯೀಕರಣಕ್ಕಾಗಿ ಜಮೀನು ಮಂಜೂರಾತಿಗೆ ಪ್ರಸ್ತಾವನೆ ಕಳುಹಿಸಿಕೊಡಲಾಗಿರುತ್ತದೆ ಅದರಂತೆ ಕಂದಿಕೆರೆ ಹೋಬಳಿ, ತಿಮ್ಮನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮೈಲುಕಬ್ಬೆ ಗ್ರಾಮದ ಸ.ನಂ.57 ರಲ್ಲಿ 106-00 ಎಕರೆ ವಿಸ್ತೀರ್ಣದ ಸರ್ಕಾರಿ ಖರಾಬು ಜಮೀನನ್ನು ಪರ್ಯಾಯವಾಗಿ ಅರಣ್ಯೀಕರಣಕ್ಕಾಗಿ ಜಮೀನು ಮಂಜೂರು ಮಾಡುವ ಸಂಬಂಧ ಪೂರಕ ದಾಖಲಾತಿಗಳೊಂದಿಗೆ ಪುನರ್ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ತಹಶೀಲ್ದಾರ್ ಚಿ.ನಾ.ಹಳ್ಳಿ ತಾಲ್ಲೂಕು, ಮತ್ತು ಉಪವಿಭಾಗಾಧಿಕಾರಿಗಳು, ತಿಪಟೂರು ಉಪವಿಭಾಗ, ರವರ ವರದಿಯಂತೆ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ ತಾಲ್ಲೂಕಿನ ಮೀಸಲು ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗಿದ್ದು ಸದರಿ ಉದ್ದೇಶವು ಸಾರ್ವಜನಿಕ ಉದ್ದೇಶವಾಗಿರುವುದರಿಂದ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಕಂದಾಯ ಇಲಾಖೆಯ ಭೂಮಿಯನ್ನು ಜಮೀನನ್ನು ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಅರಣ್ಯ ಭೂಮಿಯನ್ನು ಪಡೆಯುವ ಬದಲಾಗಿ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಸಂಬಂಧ ಪೂರ್ವಾನುಮೋದನೆ ದೊರಕಿಸಿಕೊಡಲು ಕೋರಿ ಈ ಕಾರ್ಯಲಯದಿಂದ ಕ್ರ.ಸಂ. (12) ರ ದಿನಾಂಕ:27-09-2021 ರಂತೆ ಪ್ರಸ್ತಾವನೆಯನ್ನು ವಿಶಿಷ್ಟ ಕಡತದೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಸರ್ಕಾರದಿಂದ ಕ್ರ.ಸಂ. (13) ರ ದಿನಾಂಕ:17-11-2021ರ ಪತ್ರದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣಕ್ಕಾಗಿ ಚಿ.ನಾ.ಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರ ಮೀಸಲು ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ 61-00 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಸರ್ಕಾರಿ "ಖರಾಬು" ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ 68ರಡಿ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಿ ನಿಯಮಾನುಸಾರ ಕ್ರಮವಹಿಸುವ ಷರತ್ತುಗೊಳಪಟ್ಟು, ಕರ್ನಾಟಕ ಭೂ ಮಂಜೂರಾತಿ ನಿಯಮಗಳು-1969ರ ನಿಯಮ-22(ಎ)(3)(i) ರಡಿ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ ನಿರ್ಮಾಣದ ಉದ್ದೇಶಕ್ಕಾಗಿ ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಉಚಿತವಾಗಿ ವರ್ಗಾಯಿಸಲು ಸರ್ಕಾರದ ಪೂರ್ವಾನುಮೋದನೆಯನ್ನು ನೀಡಿರುತ್ತದೆ.

ಸರ್ಕಾರದ ಪೂರ್ವಾನುಮೋದನೆ ಪತ್ರದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1) ರಡಿ ನಮೂನೆ-27ನ್ನು ಈ ಕಛೇರಿಯಿಂದ ಕ್ರ.ಸಂ. (14) ರಂತೆ ದಿನಾಂಕ:27-12-2021 ರಂದು ಹೊರಡಿಸಲಾಗಿದ್ದು, ಈ ಸಂಬಂಧ, ಉಪವಿಭಾಗಾಕಾರಿಗಳು, ತಿಪಟೂರು ಉಪವಿಭಾಗ, ತಿಪಟೂರು, ತಹಶೀಲ್ದಾರ್, ಚಿ.ನಾ.ಹಳ್ಳಿ ತಾಲ್ಲೂಕು, ಉಪತಹಶೀಲ್ದಾರ್, ನಾಡಕಛೇರಿ, ಕಂದಿಕೆರೆ, ರಾಜಸ್ವ ನಿರೀಕ್ಷಕರು, ಕಂದಿಕೆರೆ ಹೋಬಳಿ, ಸಂಬಂಧಿಸಿದ ಗ್ರಾಮಲೆಕ್ಕಿಗರು ತಿಮ್ಮನಹಳ್ಳಿ ವೃತ್ತ ಚಿ.ನಾ.ಹಳ್ಳಿ ತಾಲ್ಲೂಕು, ಮತ್ತು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತಿಮ್ಮನಹಳ್ಳಿ ಗ್ರಾಮಪಂಚಾಯಿತಿ, ಚಿ.ನಾ.ಹಳ್ಳಿ ತಾಲ್ಲೂಕು ಇವರುಗಳ ಕಛೇರಿಗಳಲ್ಲಿ ಪ್ರತ್ಯೇಕವಾಗಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಚುರಪಡಿಸಿದ ಬಗ್ಗೆ ನಿಗಧಿತ ಅವಧಿ 90 ದಿನಗಳು ಮುಗಿದ ನಂತರ ಸಾರ್ವಜನಿಕ ಸಹಿ ಪಡೆದು ನಿಗಧಿತ ಅವಧಿಯಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲವೆಂದು ಕ್ರ.ಸಂ.(15),(16)ಮತ್ತು (17) ರಂತೆ ವರದಿ ಸಲ್ಲಿಸಿರುತ್ತಾರೆ ಮತ್ತು ಈ ಕಾರ್ಯಾಲಯದಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು ಈ ಕಛೇರಿಗೆ ಯಾವುದೇ ತಕರಾರು ಬಂದಿರುವುದಿಲ್ಲ.

ಪರಿಶೀಲಿಸಲಾಗಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 68(1) ರಡಿ ನಮೂನೆ 27 ನ್ನು ಸಾರ್ವಜನಿಕರ ಅವಗಾಹನೆಗಾಗಿ ದಿನಾಂಕ:27-12-2021 ರಿಂದ 18-04-2022 ರವರೆಗೆ ಪ್ರಚುರ ಪಡಿಸಲಾಗಿದ್ದು, ನಿಗದಿತ ಅವಧಿ 90 ದಿನಗಳು ಪೂರ್ಣಗೊಂಡಿದ್ದು ಸಾರ್ವ ಜನಿಕರಿಂದ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(5) ರಡಿ ತುಮಕೂರು ಜಿಲ್ಲೆ, ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನಲ್ಲಿ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನು ಪರ್ಯಾಯ ಅರಣ್ಯೇಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಬೇಕಾದ ಜಮೀನನ್ನು "ಸರ್ಕಾರಿ ಖರಾಬು" ವರ್ಗದ ಜಮೀನಿನ ಮೇಲೆ ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸುವ ಬಗ್ಗೆ ಅಧಿಸೂಚನೆ ಆದೇಶ ಹೊರಡಿಸಿ ಸರ್ಕಾರಿ ಗೆಜೆಟ್‌ನಲ್ಲಿ (ರಾಜ್ಯ ಪತ್ರ) ಪ್ರಕಟಿಸಲು ಶಿಫಾರಸ್ಸು ಮಾಡಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಸರ್ಕಾರದ ಪೂರ್ವಾನುಮೋದನೆ ಪತ್ರದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 59 ಎಲ್ ಜಿಟಿ 2022 ದಿನಾಂಕ:05-11-2022 ರಂತೆ ತುಮಕೂರು ಜಿಲ್ಲೆಯ ಚಿ.ನಾ.ಹಳ್ಳಿ ತಾಲ್ಲೂಕಿನ ಮೀಸಲು ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೇಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಬೇಕಾಗಿದ್ದು ಸದರಿ ಉದ್ದೇಶವು ಸಾರ್ವಜನಿಕ ಉದ್ದೇಶವಾಗಿರುವುದರಿಂದ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಕಂದಾಯ ಇಲಾಖೆಯ ಜಮೀನನ್ನು ಪರ್ಯಾಯ ಅರಣ್ಯೇಕರಣಕ್ಕಾಗಿ ಅರಣ್ಯ ಇಲಾಖೆ ಜಮೀನು ಉಚಿತವಾಗಿ ವರ್ಗಾಯಿಸುವ ಸಂಬಂಧ ಈ ಕೆಳಕಾಣಿಸಿದಂತೆ ಆದೇಶಿಸಲಾಗಿದೆ.

## ಆದೇಶ

**ನಂ: E office NO:LND(CNH):CR:73:2020-21** **ದಿನಾಂಕ:13-02-2023.**
**E-NO:63017**

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು, ಹುಳಿಯಾರು ಹೋಬಳಿ, ಬೆಳ್ಳಾರ ಗ್ರಾಮದ ಸ.ನಂ. 33 ರ ಮೀಸಲು ಅರಣ್ಯ ಪ್ರದೇಶದಲ್ಲಿ ವಿಸ್ತೀರ್ಣ 61-00 ಹೆಕ್ಟೇರ್ ಅರಣ್ಯ ಇಲಾಖೆಯ ಜಮೀನನ್ನು ಬಳಕೆ ಮಾಡಬೇಕಾಗಿರುವುದರಿಂದ ಸರ್ಕಾರದ ಪೂರ್ವಾನುಮೋದನೆ ಹಾಗೂ ಅಧಿಸೂಚನೆಯಂತೆ ತುಮಕೂರು ಜಿಲ್ಲೆ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರ ಸರ್ಕಾರಿ ಖರಾಬು ಜಮೀನಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಜಮೀನನ್ನುಪರ್ಯಾಯ ಅರಣ್ಯೇಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಲು ಆದೇಶಿಸಿದೆ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆ ಉಚಿತವಾಗಿ ವರ್ಗಾಯಿಸಲಾದ ಜಮೀನನ್ನು ಅರಣ್ಯ ಇಲಾಖೆಗೆ ನಕ್ಷೆಯೊಂದಿಗೆ ಹಸ್ತಾಂತರಿಸಿರುವ ಬಗ್ಗೆ ಹಾಗೂ ಅರಣ್ಯ ಇಲಾಖೆಯಿಂದ ಭದ್ರಾ ಮೇಲ್ದಂಡೆ ಯೋಜನಾಧಿಕಾರಿಗಳಿಗೆ ಅರಣ್ಯ ಜಮೀನನ್ನು ಹಸ್ತಾಂತರಿಸುವ ಬಗ್ಗೆ ಕ್ರಮವಹಿಸಲು ತಹಶೀಲ್ದಾರ್ ಚಿ.ನಾ.ಹಳ್ಳಿ ರವರಿಗೆ ಸೂಚಿಸಿದೆ.

**ಚೆಕ್ಕುಬಂದಿ:**

ಕಂದಾಯ ಇಲಾಖೆಯಿಂದ ವರ್ಗಾಯಿಸಲಾದ ಚಿ.ನಾ.ಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ, ಮೈಲುಕಬ್ಬೆ ಗ್ರಾಮದ ಸರ್ವೆ ನಂ.57 ರಲ್ಲಿನ ವಿಸ್ತೀರ್ಣ 42-84 ಹೆಕ್ಟೇರ್ (106-00 ಎಕರೆ-ಗುಂಟೆ) ಚೆಕ್ ಬಂದಿ

| | | |
|---|---|---|
| ಪೂರ್ವಕ್ಕೆ | - | ಸ.ನಂ.57ರ ಉಳಿಕೆ ಜಮೀನು. |
| ಪಶ್ಚಿಮಕ್ಕೆ | - | ತಿಮ್ಮನಹಳ್ಳಿ ಹಾಗೂ ಬೆಳವಾಡಿ ಗ್ರಾಮದ ಗಡಿ. |
| ಉತ್ತರಕ್ಕೆ | - | ಬಡಿಕೆಗುಡ್ಡು ಗ್ರಾಮದ ಗಡಿ |
| ದಕ್ಷಿಣಕ್ಕೆ | - | ರಸ್ತೆ ಮತ್ತು ಸ.ನಂ57 ಉಳಿಕೆ ಜಮೀನು. |

**ಷರತ್ತುಗಳು:-**

1. ಸದರಿ ಜಮೀನನ್ನು ಯಾವ ಉದ್ದೇಶಕ್ಕಾಗಿ ವರ್ಗಾಯಿಸಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಸಹಿ/-
ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ.

ಪ್ರತಿಯನ್ನು :-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಭೂ.ಮಂ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಕಂದಾಯ ಇಲಾಖೆ, 2ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ಅರಣ್ಯ ವಿಭಾಗ, ತುಮಕೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಉಪವಿಭಾಗಾಧಿಕಾರಿ, ತಿಪಟೂರು ಉಪವಿಭಾಗ, ತಿಪಟೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಭದ್ರಾ ಮೇಲ್ದಂಡೆ ಯೋಜನೆ, ವಿಭಾಗ ನಂ.9 ಶಿರಾ, ಇವರಿಗೆ ಸೂಕ್ತ ಕ್ರಮಕಾಗಿ ಕಳುಹಿಸಿದೆ.
6. ವಲಯ ಅರಣ್ಯಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ, ಚಿ.ನಾ.ಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ತಹಶೀಲ್ದಾರ್, ಚಿ.ನಾ.ಹಳ್ಳಿ ತಾಲ್ಲೂಕು ಇವರಿಗೆ ಮೂಲ ಕಡತದೊಂದಿಗೆ ಕಳುಹಿಸುತ್ತಾ ಕಂದಾಯ ದಾಖಲೆಗಳಲ್ಲಿ ಸೂಕ್ತ ಬದಲಾವಣೆ ಮಾಡಲು ಹಾಗೂ ದುರಸ್ತು ಪಡಿಸಲು ಸೂಚಿಸಿ, ಈ ಕಛೇರಿಯ ನಂ: ಇ-ಆಫೀಸ್ ಎಲ್ಎನ್ಡಿ(ಸಿಎನ್ಹೆಚ್)ಸಿಆರ್/73/2020-21 ಮೂಲ ಕಡತವನ್ನು ಲಗತ್ತಿಸಿ ಕಳುಹಿಸಿದೆ.
8. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿ.ನಾ.ಹಳ್ಳಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತಿಮ್ಮನಹಳ್ಳಿ ಗ್ರಾಮಪಂಚಾಯಿತಿ, ಚಿ.ನಾ.ಹಳ್ಳಿ ತಾಲ್ಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಕಂದಾಯ ತನಿಖಾಧಿಕಾರಿ, ಕಂದಿಕೆರೆ ಹೋಬಳಿ, ಮತ್ತು ಗ್ರಾಮಲೆಕ್ಕಿಗರು ತಿಮ್ಮನಹಳ್ಳಿ ವೃತ್ತ, ಚಿ.ನಾ.ಹಳ್ಳಿ ತಾಲ್ಲೂಕು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
11. ಕಛೇರಿ ಪ್ರತಿಗಳು.

ಅಪರ ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ.